ಸರ್ಕಾರಿ ಪ್ರೌಢಶಾಲೆ, ಮಹಾಲಿಂಗಪುರದಲ್ಲಿ ಕೊಠಡಿಗಳ ಅವಶ್ಯಕತೆ ಇರುತ್ತದೆ. ಅದರಲ್ಲಿ ಮದಬಾವಿ ಸರ್ಕಾರಿ ಪ್ರೌಢಶಾಲೆಗೆ, ಆರ್.ಐ.ಡಿ.ಎಫ್.–14 ರಲ್ಲಿ 18.70 ಲಕ್ಷ ರೂ.ಗಳಲ್ಲಿ 4 ಕೊಠಡಿಗಳ ನಿರ್ಮಾಣಕ್ಕೆ ಪ್ರಸ್ತಾಪಿಸಿದ್ದು, ನಬಾರ್ಡ್‌ನ ಅನುಮೋದನೆ ದೊರೆತ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಸಂಖ್ಯೆ: ಇಡಿ 20 ಎಸ್‌ಜಹೆಚ್ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

164 ಶ್ರೀ ಸಿದ್ದು ಸವದಿ (ತೇರದಾಳ)
ಮಾನ್ಯ ವಸತಿ ಹಾಗೂ ಮುಜರಾಯಿ

ಸಚಿವರು

1. ತೇರದಾಳ ಮಹಾಲಿಂಗಪುರ ಮತ್ತು ರಬಕವಿ–ಬನಹಟ್ಟಿ ನಗರ ಪ್ರದೇಶಗಳಲ್ಲಿ ಸಾವಿರಾರು ಆಶ್ರಯ ರಹಿತ ಕುಟುಂಬಗಳಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಹೌದು

2003ರ ಸ್ಥಳೀಯ ಸಂಸ್ಥೆಗಳ ಸಮೀಕ್ಷೆ ಪ್ರಕಾರ ಈ ಕೆಳಗಿನಂತೆ ನಿವೇಶನರಹಿತರು ಮತ್ತು ವಸತಿರಹಿತರಿರುತ್ತಾರೆ.

	ವಸತಿರಹಿತರು	ನಿವೇಶನರಹಿತರು	ಒಟ್ಟು
ತೇರದಾಳ	33	113	146
ಮಹಾಲಿಂಗಪುರ	1114	735	1879
ರಬಕವಿ ಬನಹಟ್ಟಿ	944	250	1194
ಒಟ್ಟು	2091	1098	3219

2. ಹಾಗಿದ್ದಲ್ಲ, ಎಂದಿನಿಂದ ಈ ಎಲ್ಲಾ ಕುಟುಂಬಗಳಿಗೆ ಆಶ್ರಯವನ್ನು ಒದಗಿಸಲಾಗುವುದು;

ತೇರದಾಳ, ಮಹಾಲಿಂಗಪುರ ಮತ್ತು ರಬಕವಿ–ಬನಹಟ್ಟಿ ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ವಸತಿರಹಿತರಿಗೆ ರಾಜ್ಯ ಸರ್ಕಾರದ ನಗರ ಆಶ್ರಯ ಯೋಜನೆಯಡಿಯಲ್ಲಿ 2000–01 ರಿಂದ 2005–06 ರವರೆಗೆ 1355 ಮನೆಗಳನ್ನು ಮಂಜೂರು ಮಾಡಿದ್ದು, 1213 ಮನೆಗಳನ್ನು ಪೂರ್ಣಗೊಳಿಸಿ 140 ಮನೆಗಳು ಪ್ರಗತಿಯಲ್ಲಿರುತ್ತವೆ ಹಾಗೂ 2 ಮನೆಗಳು ಇನ್ನೂ ಪ್ರಾರಂಭವಾಗಬೇಕಾಗಿರುತ್ತದೆ.

ಸ್ಥಳ	ಮಂಜೂರಾದ ಮನೆಗಳು	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು	ಪ್ರಾರಂಭವಾಗ ಬೇಕಾದ ಮನೆಗಳು

ತೇರದಾಳ	624	604	20	0
ಮಹಾಲಿಂಗಪುರ	431	321	110	0
ರಬಕವಿ ಬನಹಟ್ಟಿ	300	288	10	2
ಒಟ್ಟು	1355	1213	140	2

ಮುಂದೆ ನಗರ ಆಶ್ರಯ ಯೋಜನೆಯಡಿಯಲ್ಲಿ ಗುರಿ ನಿಗದಿಪಡಿಸಿ ಉಳಿದಂತಹ ಫಲಾನುಭವಿಗಳಿಗೆ ಸೂರು ಕಲ್ಪಿಸಲಾಗುವುದು.

3 ಈ ಮೂರೂ ನಗರಗಳಲ್ಲಿ ಆಶ್ರಯವಾಗಿ ಮನೆ ಕಟ್ಟಿಕೊಂಡು ಅರಣ್ಯ ವರ್ಷಗಳಿಂದ ನಾಲ್ಕಾರು ಸಾವಿರ ಕುಟುಂಬಗಳಿದ್ದು, ಅವರೆಲ್ಲರಿಗೆ ಹಕ್ಕುಪತ್ರ ಕೊಡುವ ಯೋಜನೆ ಇದೆಯೇ; ಇದ್ದಲ್ಲಿ ಎಂದಿನಿಂದ ಕೊಡಲಾಗುವುದು;

ಈ ಪ್ರದೇಶವು ಅರಣ್ಯ ವ್ಯಾಪ್ತಿಗೆ ಬರುವುದರಿಂದ ಅರಣ್ಯ ಸಂರಕ್ಷಣಾ ಕಾಯ್ದೆ, 1980ರ ಪ್ರಕಾರ ಅರಣ್ಯ ಪ್ರದೇಶದಲ್ಲಿ ವಸತಿ ಸೌಲಭ್ಯಕ್ಕಾಗಿ ನಿವೇಶನ ನೀಡಲು ಅವಕಾಶವಿರುವುದಿಲ್ಲ.

4 ಆಶ್ರಯ ಮನೆ ಮಂಜೂರಾತಿ ಕೊಡಲು ನಿವೇಶನಗಳ ಕೊರತೆಯಿರುವುದು ನಿಜವಲ್ಲವೇ

ಹೌದು,

5 ಆಶ್ರಯ ಮನೆಗಳಿಗಾಗಿ ಜಮೀನುಗಳನ್ನು ಖರೀದಿಸಲು ಇರುವ ಬೆಲೆ ಮತ್ತು ನಿಯಮಗಳೇನು;

ಸರ್ಕಾರವು ಖಾಸಗಿ ಜಮೀನುಗಳನ್ನು ಖರೀದಿಸಲು ಮಾರ್ಗಸೂಚಿ ಬೆಲೆಯನ್ನು ನಿಗದಿಪಡಿಸಿದ್ದು, ಮಾರ್ಗಸೂಚಿ ಬೆಲೆಯ ಎರಡರಷ್ಟಕ್ಕೆ ಖಾಸಗಿ ಜಮೀನುಗಳನ್ನು ಖರೀದಿಸಲು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

6 ಹಾಗಿದ್ದಲ್ಲಿ, ಯಾವ ಮೂಲದಿಂದ ಆಶ್ರಯ ಮನೆಗಳನ್ನು ನೀಡಲಾಗುವುದು;

ತೇರದಾಳ, ಮಹಾಲಿಂಗಪೂರ ಮತ್ತು ರಬಕವಿ–ಬನಹಟ್ಟಿ ನಗರ ಪ್ರದೇಶಗಳಲ್ಲಿ ವಸತಿ ರಹಿತರಿಗೆ ನಗರ ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು

ನೀಡಲಾಗುವುದು. ನಿವೇಶನರಹಿತರಿಗೆ ನಿವೇಶನ ಒದಗಿಸಲು ನಗರ ನಿವೇಶನ ಯೋಜನೆ ಇದ್ದು, ಈ ಯೋಜನೆಯಡಿಯಲ್ಲಿ ನಿವೇಶನಗಳನ್ನು ಹಂಚಲಾಗುವುದು. ನಿವೇಶನ ಹಂಚಲು ಸರ್ಕಾರಿ ಜಮೀನ ಲಭ್ಯವಿಲ್ಲದಿದ್ದಲ್ಲಿ ಜಿಲ್ಲಾಧಿಕಾರಿಗಳು ಮೇಲೆ ತಿಳಿಸಿರುವಂತ ಕ್ರಮ ಕೈಗೊಂಡು ಜಮೀನು ಖರೀದಿಸಲು ಕ್ರಮ ಕೈಗೊಳ್ಳಲಾಗುವುದು. ತದನಂತರ ನಿವೇಶನ ರಚಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಿ ಮನೆಗಳನ್ನು ನೀಡಲಾಗುವುದು.

ಸಸಂಖ್ಯೆ: ವಇ 28 ಹೆಚಿಎಂ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನ ಸಭೆ

164ಶ್ರೀ ಸಿದ್ದು ಸವದಿ (ತೆರದಾಳ್)
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.
ರಾಜ್ ಸಚಿವರು

ಅ. ರಾಜ್ಯದಲ್ಲಿ ಒಟ್ಟು ಎಷ್ಟು ಗ್ರಾಮ ಪಂಚಾಯತಿಗಳಿವೆ; ಯಾವ ನಿಯಮಾವಳಿ ಪ್ರಕಾರ ರಚನೆ ಮಾಡಲಾಗಿದೆ.

ರಾಜ್ಯದಲ್ಲಿ ಒಟ್ಟು 5628 ಗ್ರಾಮ ಪಂಚಾಯಿತಿಗಳಿರುತ್ತವೆ. ಇವುಗಳನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮಗಳು 1993ರ ಪ್ರಕರಣ 4 ಮತ್ತು 5 ರನ್ವಯ ರಚನೆ ಮಾಡಲಾಗುವುದು./ ಮಾಡಲಾಗಿದೆ.

ಆ. ಹಾಲಿ ಗ್ರಾಮ ಪಂಚಾಯತ್‌ಗಳಿಂದ ಬೇರ್ಪಟ್ಟು, ಹೊಸ ಪಂಚಾಯತ್‌ಗಳಿಗೆ ಬೇಡಿಕೆಯಿದ್ದು, ಅದನ್ನು ಹೇಗೆ ಮತ್ತು ಎಂದು ರಚನೆ ಮಾಡಲಾಗುವುದು;

ಕ.ಪಂ.ರಾ. ಅಧಿನಿಯಮ 1993ರ ಪ್ರಕರಣ 4(1)(2)(ಎ)(ಬಿ) ರನ್ವಯ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸರ್ಕಾರದ ಸಾಮಾನ್ಯ ಮತ್ತು ವಿಶೇಷ ಆದೇಶಗಳಿಗೆ ಒಳಪಟ್ಟು ಅನುಮತಿಯೊಂದಿಗೆ ಕ್ರಮ ಕೈಗೊಳ್ಳುವರು.

ಇ. ಮಾಡದಿದ್ದಲ್ಲಿ, ಸಣ್ಣ ಗ್ರಾಮಗಳಿಗೆ ತಾರತಮ್ಯವಾಗುವುದರಿಂದ ಅದನ್ನು ಸರಿಪಡಿಸಲು ಯೋಜನೆಯನ್ನೇನಾದರೂ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

(ಆ) ಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ:ಗ್ರಾಅಪ:18: ಗ್ರಾಪಸ:2009